


# ದೈತ್ಯ ಡೈನೊಸಾರ್

■ ಪರಾಶಾ

ಲಕ್ಷಾಂತರ ವರ್ಷಗಳ ಹಿಂದೆ ಭೂಮಿಯಲ್ಲಿ ಜೀವಿಸಿದ್ದ ಡೈನೊಸಾರ್ ಎಂಬ ಭಯಂಕರ ಜೀವಿಯ ಬೃಹತ್ ಪ್ರತಿಮೆ ನೋಡಲು ಕೆನಡಾ ಪ್ರಾಂತದ ಅಲ್ಬರ್ಟದಲ್ಲಿರುವ ಡ್ರಮ್ಮೆಲ್ಲರ್ ಪಟ್ಟಣಕ್ಕೆ ಹೋಗಬೇಕು. ಫೈಬರ್ ಗ್ಲಾಸ್ ಮತ್ತು ಉಕ್ಕು ಬಳಸಿ ಕುಶಲ ಕಲಾವಿದರು ಅದನ್ನು ತಯಾರಿಸಿದ್ದಾರೆ. 42 ಅಡಿ ಉದ್ದವಿರುವ ಅದರ ಎತ್ತರ 13 ಅಡಿಗಳಷ್ಟಿದೆ. 73 ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಿರುವ ಇದರ ನಿರ್ಮಾಣ ಮಾಡಲು 64.73 ಟನ್ ಉಕ್ಕು, 65 ಸಾವಿರ ಪೌಂಡು ಫೈಬರ್ ಬಳಕೆಯಾಗಿದೆ.

106 ಮೆಟ್ಟಿಲುಗಳನ್ನು ಏರಲು ಬಲವಿರುವವರು ಈ ಡೈನೊಸಾರ್ ಬಳಿಗೆ ತಲುಪಬಹುದು. ಆದರೆ ಎಚ್ಚರವಿರಲಿ, 60 ಚದರ ಅಡಿ ಅಗಲವಿರುವ ಅದರ ಬಾಯಿಯೊಳಗೆ ಆರರಿಂದ ಹನ್ನೆರಡು ಮಂದಿಯನ್ನು ನುಂಗುವ ತಾಕತ್ತು ಕೂಡ ಇದೆ. ■